ಹಿಡಿದರೆ ಮಾತ್ರವೇ 'ಖುಲ್ ಜಾ ಸಿಮ್ ಸಿಮ್' ರೀತಿಯಲ್ಲಿ ಮುಚ್ಚಳ ತಿರುಗಿ ಡಬ್ಬಿಯ ಒಳಸರಿಯುತ್ತಿತ್ತು. ಆ ಟ್ರಿಕ್ಕನ್ನು ಅಕ್ಕ ಸರಳಾ ಮುಂಚೆ ಕಲಿತಳು, ಅವಳು ಲಗ್ನವಾಗಿ ಹೋದ ಮೇಲೆ ಮಳೆಗಾಲದಲ್ಲಿ ಅವ್ವನ ಅಸ್ತಮಾ ಹೆಚ್ಚಾದಾಗ ತಾನೂ ಕಲಿತು ಅನ್ನಕ್ಕಿಡುತ್ತಿದ್ದೆ. ಅಪ್ಪ ಮಾತ್ರ ಅಡುಗೆಮನೆಯತ್ತ ಇಣುಕಿಯೂ ನೋಡದೆ ಅವ್ವ ಬಡಿಸಿದ ಬಿಸಿಬಿಸಿ ಅನ್ನಕ್ಕೆ, "ಮುದ್ಯಾಗೇದ, ಉದುರಾಗೇದ" ಅಂತ ಹೆಸರಿಡುತ್ತಲೇ ಸಾರು ಸುರುಕೊಂಡು ಉಂಡೇ ಉಂಡರು. ಮುಂದೆ ತಾನೂ ಕಲಿಯಲು ಬೆಳಗಾವಿಯ ಆರ್.ಪಿ.ಡಿ. ಕಾಲೇಜಿಗೆ ಹೋಗಿ ಅಲ್ಲೇ ಹಾಸ್ಟೆಲಲ್ಲಿ ಇರುವಾಗಲೇ ಅವ್ವನ ಅಸ್ತಮಾ ತೀರ ಹೆಚ್ಚಾಗಿತ್ತು. ಕಣಕ ನಾದಿ ನಾಲ್ಕು ಚಪಾತಿ ಲಟ್ಟಿಸುವತನಕ ಎರಡು ಸಾರಿ ಉಸ್ಸೆಂದು ಕೆಳಗೆ ಕೂತು ಎದ್ದು ಮಾಡುತ್ತಿದ್ದಳು, ಆದರೂ ಎಲ್ಲಾ ಕೆಲಸ ಅವಳೇ ಮಾಡುತ್ತಿದ್ದಳು. ಒಂದಿನಾ ಕೂಡಾ ತಾವು ಅಡುಗೆ ಮಾಡುವುದು ಹೋಗಲಿ ಅವ್ವನಿಗೆ, "ನೀ ದಣಿದಿ ಇವತ್ತು. ಬರೇ ಅನ್ನ ಮಾಡಿಬಿಡು, ಹಿಟ್ಟು ಬ್ಯಾಡ" ಅಂತ ಕೂಡಾ ಅಪ್ಪ ಅನ್ನಲಿಲ್ಲ. ಅವರಿಗೆ ಊಟಕ್ಕೆ ಪಲ್ಯ, ಕೋಸಂಬ್ರಿ, ಚಪಾತಿ, ಮೇಲೆ ಸೇಂಗಾ ಮೆಣಸಿನಕಾಯಿ ಚಟ್ನಿ ಎಲ್ಲಾ ನಿತ್ಯ ಆಗಬೇಕು. ಅವ್ವನ ಈ ಪರಿಸ್ಥಿತಿ ನೋಡಿ ಅಕ್ಕನ ಚೊಚ್ಚಲ ಬಾಣಂತನ ಕೂಡಾ ಪಾಪ ಅವಳತ್ತೆಯೇ ಮಾಡಿದ್ದರು. ಅವ್ವನೂ ಹೋದ ಮೇಲೆ ಹೀಗೆ ಕೈ ಸುಟ್ಟುಕೊಳ್ಳುತ್ತಾ, ಕುಕ್ಕರಿಗೆ ಮುಚ್ಚಳ ಬಡಿದು ನೆಗ್ಗಿಸುತ್ತಾ ಕೂತಿದ್ದಾರೆ ಒಬ್ಬರೇ...' ಅನ್ನಿಸುವಾಗಲೇ ಒಳಗಿಂದ ಸುಂಯ್ ಅಂತ ಕುಕ್ಕರು ಹವೆ ಹಿಡಿದ ಸದ್ದು ಅನಂತರ ಸೀಟಿಯ ಸಪ್ಪಳವೂ ಬಂದಾಗ ಉಪಾಯವಿಲ್ಲದೆ ಎದ್ದ. ಪಾಯಖಾನೆಗೆ ಹೋದರೆ ಅಲ್ಲಿಯ ದೃಶ್ಯ ಕಂಡು ಮೈ ಜುಮ್ಮೆಂದಿತು. ಕಾಲಿಡುವ ಜಾಗದಲ್ಲಿ ಎರಡೂ ಕಡೆ ಫೂಟಿನೆತ್ತರ ದಪ್ಪ ಚಪ್ಪಡಿಕಲ್ಲುಗಳನ್ನು ಪೇರಿಸಿಟ್ಟಿದ್ದಾರೆ! ಬಹುಶಃ ಕೆಳಗೆ ಕೂಡಲಾಗದೇ ಇದರ ಮೇಲೆ ಕೂತು... 'ಛೇ ಕಮೋಡ್ ಕಟ್ಟಿಸಿಕೋತೀನಿ' ಅಂದರೆ ರೊಕ್ಕ ಕಳಿಸುತ್ತಿದ್ದೆ, ಅದು ಬಿಟ್ಟು ಹೀಗೆ ಏನೇನೋ ಬೇಜಮಿ ಮಾಡಿಕೊಂಡು ಛೇಛೇ... ಎನ್ನಿಸಿ ಹೊರಬರುವಾಗ ಕಂಡಿತ್ತು ಗೋಡೆಯ ತುಂಬಾ ಹಿಡಕೊಂಡು ಎದ್ದ ಕೈಗುರುತುಗಳು. ಕಾಲು ತೊಳೆದುಕೊಳ್ಳಲು ಬಚ್ಚಲಿಗೆ ಬಂದರೆ ಜಾರು ಮೇಲ್ಮೈಯ ಹಾವಸೆಗೆ ಅಸಹ್ಯದಿಂದ ವಾಕರಿಕೆ ಬಂದಂತಾಯ್ತು. ಹ್ಯಾಗೋ ಕಾಲಿನಿಂದಲೇ ಉಜ್ಜಿ ಹಾವಸೆ ಹೋಗಿಸಿ ಕುಕ್ಕರಗಾಲಲ್ಲಿ ಕೂತು ತೋಡಿಟ್ಟಿದ್ದ ಬಕೆಟ್ಟಿನಿಂದ ಎರಡು ತಂಬಿಗೆ ಸುರಿದುಕೊಳ್ಳುವಾಗಲೇ ಬಾಗಿಲಗಂಟೆಯ ಸದ್ದಾಯಿತು. ಹತ್ತು ಸೆಕೆಂಡಿನ ಅನಂತರ ಮತ್ತೊಮ್ಮೆ. ಇವ ನೀರು ಸುರಿದುಕೊಳ್ಳೋದು ನಿಲ್ಲಿಸಿ ಬಚ್ಚಲಿನ ಬಾಗಿಲಿಗೆ ಕಿವಿ ಹಚ್ಚಿದ. ಮತ್ತೂ ಒಮ್ಮೆ ಬಾಗಿಲಗಂಟೆ ಕಿರ್ರ... ಅಂದಿತು. 'ಅರೆ ಇದೀಗ ಇಲ್ಲೇ ಇದ್ದರಲ್ಲ ಅಪ್ಪ ಎಲ್ಲಿ ಹೋದರು?' ಅಂತ ಗಡಿಬಿಡಿಸಿ ಟಾವೆಲ್ ಸುತ್ತಿಕೊಂಡು ಹೊರಬಂದರೆ, ಅವರು ತಮಗೆ ಏನೂ ಕೇಳೇ ಇಲ್ಲದಂತೆ ಅಡುಗೆಮನೆಯಲ್ಲಿ ಪಲ್ಯಕ್ಕೆ ಒಗ್ಗರಣೆ ಹಾಕುತ್ತಿದ್ದಾರೆ. ರಮೇಶನೇ ಓಡಿ ಹೋಗಿ ಬಾಗಿಲು ತೆಗೆದಾಗ ಕೆಲಸದ ಪಾರ್ವತಿ, "ಸಾಕಾತ ನೋಡ ರಮೇಶಪ್ಪಾ ಈ ಅಜ್ಜನ ಕೂಡಾ ಗುದ್ದಾಟ. ಎಷ್ಟು ಸರತೆ ಬೆಲ್ ಮಾಡಿದರೂ ಕೇಳಂಗಿಲ್ಲ; ಬಾಗಿಲಾ ತೆಗೆಯಂಗಿಲ್ಲ! ಕಡೀಗೊಮ್ಮೆ ಗಂಟಲು ಹರಿಯೋ ಹಂಗ ಒದರಿದ ಮ್ಯಾಲ ಸಾವಕಾಶ ಬಂದು ಬಾಗಿಲಾ ತೆಗೀತಾನ. ಒಮ್ಮೊಮ್ಮೆಂತೂ ನಾನು 'ನಾಳೆ ಬರಂಗಿಲ್ಲ' ಅಂತ ಒದರಿ ಹೇಳಿಹೋಗಿರತೇನಿ. ಆದರೂ ಮರುದಿನ 'ಯಾವಾಗ ಹೇಳಿದ್ದೀ? ಹೇಳೇಇಲ್ಲ ನೀ' ಅಂತಾನ. 'ನಿನಗ ಕಿವಿ ಕೇಳಂಗಿಲ್ಲೋ ಯಜ್ಜಾ ನಾ ಏನು ಮಾಡಲಿ?' ಅಂದರ 'ನನ್ನ ಕಿವುಡಂತೀ? ನಿನ್ನ... ನಿನ್ನ ನೋಡು ಹೆಂಗ ಮಾಡತೇನಿ' ಅಂತ ಕಾಲುಕೆದರಿ ಜಗಳಾಡಾಕ ಬರತಾನ." ಅಂತ ತಕರಾರುಗಳ ಲಿಸ್ಟೇ ಹೇಳಿದಾಗ ಅಪ್ಪನನ್ನು ಮುಂಬಯಿಗೆ ಕರೆದೊಯ್ಯುವ ವೇಳೆ ಬಂದಿದೆ ಅಂತ ರಮೇಶನಿಗೆ ಖಚಿತವಾಗಿತ್ತು.

ಅವರೇ ತಟ್ಟೆಯಿಟ್ಟು ಊಟಕ್ಕೆ ಕರೆದರು, ಹೋಗಿ ಕುಳಿತ. ಅಲ್ಲೇ ಫೂಟು ದೂರದಲ್ಲಿದ್ದ ಅವರ ಮುಖ, ಸರಭರ ಅಂತ ಸುರಿದುಣ್ಣುವ ಸದ್ದು, ತುತ್ತಿಗೊಮ್ಮೆ ಅಲ್ಲಾಡುವ ಬಿಳೀ ಜೊಂಡುಮೀಸೆ;